## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶಿವಮೊಗ್ಗ ಜಿಲ್ಲೆ, ಹೊಸನಗರ ತಾಲ್ಲೂಕು ಕಸಬಾ ಹೋಬಳಿ, ಕಳೂರು ಗ್ರಾಮದ ಸ.ನಂ.136, ಗಂಗನಕೊಪ್ಪ ಗ್ರಾಮದ ಸ.ನಂ.7,5,2,74,67,52 ಹಾಗೂ ಟೆಂಕಬೈಲು ಗ್ರಾಮದ ಸ.ನಂ.13ರಲ್ಲಿನ ಜಮೀನನ್ನು ರಾಷ್ಟ್ರೀಯ ಹೆದ್ದಾರಿ 766ಸಿ ನಿರ್ಮಾಣದ ಉದ್ದೇಶಕ್ಕಾಗಿ ಲೋಕೋಪಯೋಗಿ ಇಲಾಖೆಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ:- ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ, ಇವರ ಪತ್ರ ಸಂಖ್ಯೆ: ಎಲ್.ಎನ್.ಡಿ.(2) ಎಲ್‌ಜಿ2/133/2022 (ಇ-122885) ದಿನಾಂಕ: 10.01.2023.

* * *

**ಪ್ರಸ್ತಾವನೆ:**

ಮೇಲೆ ಓದಲಾದ ದಿನಾಂಕ: 10.01.2023ರ ಪತ್ರದ ಮೂಲಕ ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಇವರು ಹೊಸನಗರ ತಾಲ್ಲೂಕು, ಕಸಬಾ ಹೋಬಳಿ, ಗಂಗನಕೊಪ್ಪ ಗ್ರಾಮದ ವಿವಿಧ ಸರ್ವೇ ನಂಬರ್ ಹಾಗೂ ಕಳೂರು ಗ್ರಾಮದ ಸ.ನಂ.136 ಮತ್ತು ಟೆಂಕಬೈಲು ಗ್ರಾಮದ ಸ.ನಂ.13 ರಲ್ಲಿನ ಈ ಕೆಳಕಂಡ ಪಟ್ಟಿಯಲ್ಲಿನ ವಿಸ್ತೀರ್ಣದ ಜಮೀನುಗಳನ್ನು **"ರಾಷ್ಟ್ರೀಯ ಹೆದ್ದಾರಿ 766 ಸಿ"** ನಿರ್ಮಾಣದ ಉದ್ದೇಶಕ್ಕೆ ಕಾರ್ಯನಿರ್ವಾಹಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ವಿಭಾಗ, ಎ.ಪಿ.ಎಂ.ಸಿ.ಯಾರ್ಡ್ ಶಿವಮೊಗ್ಗ ಇವರಿಗೆ ಮಂಜೂರು ಮಾಡುವ ಬಗ್ಗೆ ಈ ಕೆಳಗಿನಂತೆ ವರದಿ ಸಲ್ಲಿಸಿರುತ್ತಾರೆ.

| ಕ್ರ.ಸಂ | ಗ್ರಾಮದ ಹೆಸರು | ಸ.ನಂ. | ಕೋರಿರುವ ಜಮೀನು | | | ಆರ್‌ಟಿಸಿಯಲ್ಲಿ ನಮೂದಾಗಿರುವ ಜಮೀನು | |
|---|---|---|---|---|---|---|---|
| | | | ಹೆಕ್ಟೇರ್ | ಎಕರೆ | ಗುಂಟೆ | ತರಹೆ | ವಿಸ್ತೀರ್ಣ (ಎಕರೆ/ಗುಂಟೆ) |
| 1 | ಗಂಗನಕೊಪ್ಪ | 7 | 0-29 | 0 | 28-41 | ಕೆರೆ | 3-01 |
| | | 5 | 0-43 | 1 | 2-17 | ಸರ್ಕಾರ ಮುಫತ್ತು | 46-24 |
| | | 2 | 0-39 | 0 | 38-48 | ತೋಟಗಾರಿಕೆ ಇಲಾಖೆ | 6-25 |
| | | 74 | 0-57 | 1 | 16-23 | ತೋಟಗಾರಿಕೆ ಇಲಾಖೆ | 22-03 |
| | | 67 | 0-13 | 0 | 13-02 | ರಾಜ ಪ್ರಮುಖರು | 1-27 |
| | | 52 | 0-54 | 1 | 13-71 | ಸರ್ಕಾರಿ ಬಂಜರು | 5-06 |
| | | 52 | 2-47 | 3 | 123.07 | ಖಬರಸ್ಥಾನ | 2 |
| 2 | ಕಳೂರು | 136 | 0-06 | 0 | 6-15 | ಗೋಮಾಳ | 4-21 |
| 3 | ಟೆಂಕಬೈಲು | 13 | 0-39 | 0 | 38-15 | ದನಗಳಿಗೆ ಮುಫತ್ತು | 16-14 |

| ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ ರಾಷ್ಟ್ರೀಯ ಹೆದ್ದಾರಿ ವಿಭಾಗ ಶಿವಮೊಗ್ಗ | |
|---|---|
| ಕಾ.ಇಂ | |
| ತಾಂತ್ರಿಕ ಸಹಾಯಕರು | |
| ಲೆಕ್ಕ ಅಧೀಕ್ಷಕರು | |
| ಕಛೇರಿ ಅಧೀಕ್ಷಕರು | |
| ವಿಷಯ ನಿರ್ವಾಹಕರು | AE-1 |
| ಕ್ರಮ ಸಂಖ್ಯೆ | |
| ದಿನಾಂಕ | |

ಪ್ರಸ್ತಾಪಿತ ಹೊಸನಗರ ತಾಲ್ಲೂಕು, ಕಸಬಾ ಹೋಬಳಿ, ಗಂಗನಕೊಪ್ಪ ಗ್ರಾಮದ ಸ.ನಂ.7,5,2,74,67,52 ಕಳೂರು ಗ್ರಾಮದ ಸ.ನಂ.136 ಹಾಗೂ ಟೆಂಕಬೈಲು ಗ್ರಾಮದ ಸ.ನಂ.13 ರಲ್ಲಿನ ಜಮೀನಿನಲ್ಲಿ, ಬೆಲೆಬಾಳುವ ಕಾಡುಜಾತಿಯ ಮರಗಳು ಇರುವುದಿಲ್ಲ. ಹೊಸನಗರ ಪಟ್ಟಣದ ಮುಖ್ಯರಸ್ತೆ ಸಂಪರ್ಕ ದಿಂದ 20.0 ಮೀ ದೂರದಲ್ಲಿರುತ್ತದೆ. ಪ್ರಸ್ತಾಪಿತ ಜಮೀನುಗಳ ಮೇಲೆ ಅಧಿಕ ವಿದ್ಯುತ್ ತಂತಿ ಹಾದುಹೋಗಿರುವುದಿಲ್ಲ. ಪ್ರಸ್ತಾಪಿತ ಪ್ರದೇಶಗಳು ರಾಷ್ಟ್ರೀಯ ಹೆದ್ದಾರಿ ನಿರ್ಮಿಸಲು ಸೂಕ್ತವಾಗಿರುವುದಾಗಿ ತಿಳಿಸಿರುತ್ತಾರೆ

ಗಂಗನಕೊಪ್ಪ, ಗ್ರಾಮದ ಸ.ನಂ.7ರಲ್ಲಿನ ಕೆರೆ ಜಮೀನನ್ನು, ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 68(1)ರಿಂದ (5)ರ ಉಪಕ್ರಮಗಳನ್ನು ಅನುಸರಿಸಿ ಉಳಿದಂತೆ ಪ್ರಸ್ತಾಪಿತ ಜಮೀನುಗಳನ್ನು "**ರಾಷ್ಟ್ರೀಯ ಹೆದ್ದಾರಿ 766ಸಿ**" ನಿರ್ಮಾಣದ ಉದ್ದೇಶಕ್ಕೆ ಕಾರ್ಯನಿರ್ವಾಹಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ವಿಭಾಗ, ಎ.ಪಿ.ಎಂ.ಸಿ.ಯಾರ್ಡ್ ಶಿವಮೊಗ್ಗ, ಇವರಿಗೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 29(1)ಡಿ ರನ್ವಯ ಉಚಿತವಾಗಿ ಮಂಜೂರು ಮಾಡುವ ಸಂಬಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಇವರ ಪ್ರಸ್ತಾವನೆಯನ್ನು ನಿಯಮಾನುಸಾರ ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ. ಆರ್‌ಡಿ 06 ಎಲ್‌ಜಿಎಸ್ 2023,**
**ಬೆಂಗಳೂರು ದಿನಾಂಕ:31.08.2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಸುತ್ತೋಲೆ ಸಂಖ್ಯೆ ಕಂಇ 46 ಎಲ್‌ಜಿಪಿ 2017, ದಿನಾಂಕ: 14.06.2018 ಮತ್ತು ಕಂಇ 32 ಎಲ್‌ಜಿಪಿ 2015, ದಿನಾಂಕ: 14.07.2021 ರನ್ವಯ ಜಲಕಾಯ/ಜಲಮೂಲಗಳನ್ನು ಒಳಗೊಂಡ ಜಮೀನನ್ನು ಮಂಜೂರು ಮಾಡಲು ಅವಕಾಶವಿಲ್ಲದೇ ಇರುವುದರಿಂದ ಶಿವಮೊಗ್ಗ ಜಿಲ್ಲೆ, ಹೊಸನಗರ ತಾಲ್ಲೂಕು, ಕಸಬಾ ಹೋಬಳಿ, ಗಂಗನಕೊಪ್ಪ ಗ್ರಾಮದ ಸ.ನಂ.7 ರಲ್ಲಿನ 3-01 ಎಕರೆ/ಗುಂಟೆ "ಕೆರೆ" ವರ್ಗೀಕರಣದ ಜಮೀನನ್ನು ಹೊರತುಪಡಿಸಿ, ಗಂಗನಕೊಪ್ಪ ಗ್ರಾಮದ ಸ.ನಂ.5 ರಲ್ಲಿನ 1-2-17 ಎಕರೆ/ಗುಂಟೆ ಜಮೀನು ಹಾಗೂ ಕಳೂರು ಗ್ರಾಮದ ಸ.ನಂ.136ರಲ್ಲಿನ 0-6-15 ಎಕರೆ/ಗುಂಟೆ ಜಮೀನು, ಟೆಂಕಬೈಲು ಗ್ರಾಮದ ಸ.ನಂ.13ರಲ್ಲಿ 0-38-15 ಎಕರೆ/ಗುಂಟೆ ಜಮೀನುಗಳು ಕ್ರಮವಾಗಿ ಸರ್ಕಾರಿ ಮುಫತ್ತು, ಗೋಮಾಳ, ದನಗಳಿಗೆ ಮುಫತ್ತು ವರ್ಗೀಕರಣದಡಿ ಬರುವ ಜಮೀನುಗಳಾಗಿರುವುದರಿಂದ ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 97(4) ರನ್ವಯ ಗೋಮಾಳ ಶೀರ್ಷಿಕೆಯಿಂದ ತಗ್ಗಿಸುವ ಷರತ್ತು ವಿಧಿಸಿ ಹಾಗೂ ಗಂಗನಕೊಪ್ಪ ಗ್ರಾಮದ ಸ.ನಂ.52ರಲ್ಲಿ 1-13-17 ಎಕರೆ/ಗುಂಟೆ ಬಂಜರು ಹಾಗೂ ಗಂಗನಕೊಪ್ಪ ಗ್ರಾಮದ ಸ.ನಂ.67ರಲ್ಲಿ 0-13-02 ಎಕರೆ/ಗುಂಟೆ ರಾಜಪ್ರಮುಖರು ಎಂದಿರುವ ಜಮೀನುಗಳನ್ನು ಕರ್ನಾಟಕ ಭೂಕಂದಾಯ ಕಾಯ್ದೆ, 1964ರ ಕಲಂ 68(1) ರಿಂದ 68(5)ರ ಪ್ರಕ್ರಿಯೆ ಅನುಸರಿಸಿ ಸಾರ್ವಜನಿಕ ಹಕ್ಕಿನಿಂದ ವಿಹಿತಗೊಳಿಸುವ ಷರತ್ತು ವಿಧಿಸಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 22(ಎ)(3)(i) ರನ್ವಯ ಉಚಿತವಾಗಿ ರಾಷ್ಟ್ರೀಯ ಹೆದ್ದಾರಿ 766ಸಿ ನಿರ್ಮಾಣದ ಉದ್ದೇಶಕ್ಕಾಗಿ ಲೋಕೋಪಯೋಗಿ ಇಲಾಖೆಯ ರಾಷ್ಟ್ರೀಯ ಹೆದ್ದಾರಿ ವಿಭಾಗ, ಎ.ಪಿ.ಎಂ.ಸಿ.ಯಾರ್ಡ್ ಶಿವಮೊಗ್ಗ ಇವರಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಮಂಜೂರು ಮಾಡಿ ಆದೇಶಿಸಿದೆ.

1. ಪ್ರಸ್ತಾವನೆಯಲ್ಲಿನ ಸರ್ಕಾರಿ ಮುಫತ್ತು, ಗೋಮಾಳ ಮತ್ತು ದನಗಳಿಗೆ ಮುಫತ್ತು ಜಮೀನನ್ನು ಕಡ್ಡಾಯವಾಗಿ ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ



Scanned with OKEN Scanner

ನಿಯಮ 97(4)ರಡಿ "ಗೋಮಾಳ" ಶೀರ್ಷಿಕೆಯಿಂದ ತೆಗೆದು, ನಂತರ ಜಿಲ್ಲಾಧಿಕಾರಿಗಳು ಮಂಜೂರಾತಿ ಆದೇಶ ನೀಡಲು ಕ್ರಮವಹಿಸುವುದು.

2. ಪ್ರಸ್ತಾವನೆಯಲ್ಲಿನ ಬಂಜರು ಮತ್ತು ರಾಜಸ್ವಮುಕ್ತ ಜಮೀನುಗಳನ್ನು ಕರ್ನಾಟಕ ಭೂಕಂದಾಯ ಕಾಯ್ದೆ, 1964ರ ಕಲಂ 68(1) ರಿಂದ 68(5)ರ ಪ್ರಕ್ರಿಯೆ ಅನುಸರಿಸಿ ಸಾರ್ವಜನಿಕ ಹಕ್ಕಿನಿಂದ ವಿಹಿತಗೊಳಿಸಿದ ನಂತರ ಜಿಲ್ಲಾಧಿಕಾರಿಗಳು ಮಂಜೂರಾತಿ ಆದೇಶ ನೀಡಲು ಕ್ರಮವಹಿಸುವುದು.

3. ಮಂಜೂರಾದ ಜಮೀನನ್ನು ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ 02 ವರ್ಷಗಳ ಅವಧಿಯೊಳಗೆ ಉಪಯೋಗಿಸತಕ್ಕದ್ದು;

4. ಮಂಜೂರಾದ ಜಮೀನನ್ನು ವಿನಾಶಕಾರಿಯಾದ ಅಥವಾ ಖಾಯಂ ಆಗಿ ಹಾನಿಕಾರಕವಾಗುವ ರೀತಿಯಲ್ಲಿ ಬಳಸತಕ್ಕದ್ದಲ್ಲ.

5. ಮಂಜೂರಾಗಿರುವ ಜಮೀನಿನಲ್ಲಿ ಯಾವುದೇ ರೀತಿಯಲ್ಲಿ ಅತಿಕ್ರಮಣವಾಗದಂತೆ ಕ್ರಮವಹಿಸುವುದು;

6. ಮಂಜೂರಾತಿ ಜಮೀನಿನ ಮೇಲೆ ಯಾವುದೇ ನ್ಯಾಯಾಲಯದಲ್ಲಿ ದಾವೆ ದಾಖಲಾಗಿದ್ದಲ್ಲಿ ಈ ಮಂಜೂರಾತಿ ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ;

7. ಮಂಜೂರಾದ ಜಮೀನನ್ನು ಕಂದಾಯ ಇಲಾಖೆಯ ಅನುಮತಿ ಇಲ್ಲದೆ ಮಾರಾಟ ಮಾಡುವುದಾಗಲೀ, ಗುತ್ತಿಗೆ/ಉಪಗುತ್ತಿಗೆಗೆ ನೀಡುವುದಾಗಲೀ, ಅಡಮಾನ, ವರ್ಗಾವಣೆ, ದಾನ ಇತರೆ ಯಾವುದೇ ರೀತಿಯ ಪರಭಾರೆ ಮಾಡತಕ್ಕದ್ದಲ್ಲ.

8. ಮಂಜೂರಾದ ಜಮೀನಿನ ಯಾವುದೇ ಭಾಗ ಅಥವಾ ಸಂಪೂರ್ಣ ಜಮೀನು ಸಾರ್ವಜನಿಕ ಉದ್ದೇಶಕ್ಕೆ ಅಗತ್ಯವಾಗಿದ್ದಲ್ಲಿ ಸರ್ಕಾರವು ಸದರಿ ಜಮೀನನ್ನು ಪರಿಹಾರ ನೀಡದೇ ಹಿಂತೆಗೆದುಕೊಳ್ಳುವ ಹಕ್ಕನ್ನು ಹೊಂದಿರುತ್ತದೆ.

9. ಮಂಜೂರಾದ ಜಮೀನಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಆರಂಭಿಸುವ ಪೂರ್ವದಲ್ಲಿ ಶಾಸನಬದ್ಧವಾಗಿ ಪಡೆಯಬೇಕಾದ ಪರವಾನಗಿಯನ್ನು ಸಂಬಂಧಿಸಿದ ಪ್ರಾಧಿಕಾರಗಳಿಂದ ಪಡೆಯುವುದು ಹಾಗೂ ನಿಯಮಾನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಕಡ್ಡಾಯವಾಗಿ ಪಾವತಿಸುವುದು;

10. ಮಂಜೂರಾದ ಜಮೀನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮಗಳಿಗೆ ಬದ್ಧವಾಗಿದ್ದು, ಸದರಿ ನಿಯಮಗಳು ಉಲ್ಲಂಘನೆಯಾದಲ್ಲಿ, ಈ ಮಂಜೂರಾತಿ ಆದೇಶವನ್ನು ರದ್ದುಪಡಿಸಿ ಮಂಜೂರಾದ ಜಮೀನನ್ನು ಯಾವುದೇ ಪರಿಹಾರ ನೀಡದೆ ಸರ್ಕಾರದ ವಶಕ್ಕೆ ಪಡೆಯಲಾಗುವುದು.

11. ಜಿಲ್ಲಾಧಿಕಾರಿಗಳು ಇತರೇ ಅವಶ್ಯಕ ಷರತ್ತುಗಳನ್ನು ವಿಧಿಸಬಹುದಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸ

Scanned with OKEN Scanner

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಕೇಂದ್ರ ಮುದ್ರಣಾಲಯ, ಬೆಂಗಳೂರು, ಇವರಿಗೆ ಕರ್ನಾಟಕ ರಾಜ್ಯ ಪತ್ರದ ಭಾಗ 4(11) ರಲ್ಲಿ ಪ್ರಕಟಣೆಗಾಗಿ, ಮತ್ತು ಮುದ್ರಿತ 15 ಪ್ರತಿಗಳನ್ನು, ಕಂದಾಯ ಇಲಾಖೆಯ ಭೂ ಮಂಜೂರಾತಿ ಶಾಖೆಯ ಕೊಠಡಿ ಸಂಖ್ಯೆ:537, 5ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು, ಇಲ್ಲಿಗೆ ಕಳುಹಿಸಲು ಕೋರಿದೆ.

<u>ಇವರಿಗೆ,</u>

1. ಮಹಾಲೇಖಪಾಲರು, ಕರ್ನಾಟಕ, (ಲೆಕ್ಕಪತ್ರ/ಲೆಕ್ಕಪರಿಶೋಧನೆ), ಬೆಂಗಳೂರು.
2. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು.
3. ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.
4. ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆಯ ರಾಷ್ಟ್ರೀಯ ಹೆದ್ದಾರಿ ವಿಭಾಗ, ಎ.ಪಿ.ಎಂ.ಸಿ.ಯಾರ್ಡ್ ಶಿವಮೊಗ್ಗ.
5. ತಹಶೀಲ್ದಾರ್ ಹೊಸನಗರ ತಾಲ್ಲೂಕು.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

<u>ಪ್ರತಿ ಮಾಹಿತಿಗಾಗಿ</u>

1. ಮಾನ್ಯ ಕಂದಾಯ ಸಚಿವರ ಆಪ್ತಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರ ಆಪ್ತಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಕಂದಾಯ ಇಲಾಖೆ [ಭೂಮಂಜೂರಾತಿ & ಭೂಸುಧಾರಣೆ] ಇವರ ಪತ್ರಾಂಕಿತ ಆಪ್ತ ಸಹಾಯಕರು, ಬಹುಮಹಡಿ ಕಟ್ಟಡ, ಬೆಂಗಳೂರು.

** ** **

Scanned with OKEN Scanner